

ಹಾಡುವುದೆಂದರೆ ತುಟಿ ಅಲ್ಲಾಡುತ್ತದೆ, ಕೈಕಾಲು ಆಡುತ್ತದೆ. ಆದರೆ ಇದಾವ ಭಂಗಿ? ತಲೆ ಕೆಳಗೆ ಮಾಡಿಕೊಂಡು ಏನೆಲ್ಲಾ ಸರ್ಕಸ್ ಮಾಡಿ ಹಾಡುವುದೆಂದರೆ.. ಈಚೆಗೆ ಲಾಸ್ ಏಂಜಲಿಸ್‌ನಲ್ಲಿ ನಡೆದ ಗ್ರಾಮಿ ಪ್ರಶಸ್ತಿ ಸಮಾರಂಭದಲ್ಲಿ ಗಾಯಕಿ ಪಿಂಕ್ ಏನೆಲ್ಲಾ ಕಸರತ್ತು ಮಾಡಿ ಹಾಡಿದಳು. ಹಾಡುವುದು ಇಷ್ಟು ಕಷ್ಟವೇ ಎಂದು ಆಸಕ್ತರಿಗೆ ಹೆದರಿಕೆ ಹುಟ್ಟಿಸುವ ಪರಿಯಾ?

ನಮ್ಮಲ್ಲಿ ತಾಜ್ ಎದುರು ಬಿಕಿನಿಯಲ್ಲಿ ಛಾಯಾಚಿತ್ರ ತೆಗೆಸಿಕೊಂಡರೂ ಕೇಳುವವರಿಲ್ಲ. ಇಂಡೊನೇಷ್ಯಾದ ಬೋರೊಬುದುರ್ ಪ್ರವಾಸಿ ತಾಣದಲ್ಲಿ ಯಾರೂ ಮೊಣಕಾಲು ತೋರಿಸುವ ಹಾಗಿಲ್ಲ. ಸರ್ಕಾರವೇ ಪ್ರವಾಸಿಗರಿಗೆ ಬಾಡಿಗೆ ಮೇಲೆ ಮೊಣಕಾಲು ಮುಚ್ಚುವ ಹಾಫ್‌ಪ್ಯಾಂಟ್ ನೀಡುತ್ತಿದೆ. ಭಾರತದಲ್ಲೂ ಇದನ್ನು ಜಾರಿ ಮಾಡಿದರೆ ಗುತ್ತಿಗೆದಾರರಿಗೆ ಹಬ್ಬದೂಟ.



ಕಳೆದ ವರ್ಷ ಬಾಲಿವುಡ್‌ನ ಕಿಂಗ್ ಶಾರೂಕ್ ಖಾನ್ ಅಮೆರಿಕದ ವಿಮಾನ ನಿಲ್ದಾಣದಲ್ಲಿ ಅನುಭವಿಸಿದ ಪಡಿಪಾಟಲು ಭಾರಿ ಸುದ್ದಿ ಮಾಡಿತ್ತು. ಆದರೆ ಕಳೆದ ವಾರ ಬಾಲಿವುಡ್ ಬೆಡಗಿ ಕೊಯಿನಾ ಮಿತ್ರಾ ನಮ್ಮ ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಸಿಬ್ಬಂದಿ ಆದೇಶದ ಮೇರೆಗೆ ಟೀಷರ್ಟ್ ಕಳಚಬೇಕಾಯಿತಂತೆ. ಹರಿದ ಜೀನ್ಸ್ ಹಾಕಿಕೊಂಡಿದ್ದಕ್ಕೆ ವಿವರ ನೀಡಲು ಅರ್ಧ ತಾಸು ಕಾಯಿಸಿದರು. ಭುಜ, ಪ್ಯಾಂಟಿನ ಜೇಬು ಬಲು ಗಟ್ಟಿ ಎಂದು ವ್ಯಂಗ್ಯವಾಡಿದರು ಎಂದೆಲ್ಲ ಉದ್ದನೆಯ ದೂರು ಹೇಳಿದ್ದಾಳೆ ಕೊಯಿನಾ. ಸದ್ಯ ಆಕೆಯ ಪುಣ್ಯ, ಕಾಸ್ಮೆಟಿಕ್ ಸರ್ಜರಿಯಿಂದ ಶೇಪು ಕಳೆದುಕೊಂಡ ಮೂಗಿನ ಬಗ್ಗೆ ಸಿಬ್ಬಂದಿ ಉಸಿರೆತ್ತಲಿಲ್ಲ!

ಸೈಕಲ್ ಅನ್ನು ಅಣಕಿಸಲೆಂಬಂತೆ ಬಂದ ಕಾರಿನ ಗತಿ ನೋಡಿ. ಕೈಕಾಲು ಕಳೆದುಕೊಂಡರೆ ಸೈಕಲ್ ರಿಕ್ಷಾದಲ್ಲೂ ಪಯಣಿಸುವ ದುರ್ಗತಿ. ಸಿಲಿಗುರಿಯಲ್ಲಿ ಈ ವ್ಯಕ್ತಿ ಆರಾಮವಾಗಿ ತನ್ನ ಸೈಕಲ್ ರಿಕ್ಷಾದ ಮೇಲೆ ಕಾರು ಹೊತ್ತೊಯ್ಯುತ್ತಿದ್ದಾನೆ.





ಮಕ್ಕಳ ಆಟಿಕೆಯಾ, ಮುಖವಾಡವಾ? ಅಲ್ಲ, ಡಿಸೈನರ್ ಹೆಲ್ಮೆಟ್. ಡೆನ್ವರ್‌ನಲ್ಲಿ ಡಿಸೈನರ್ ಹೆಲ್ಮೆಟ್‌ಗಳ ಅಂತರರಾಷ್ಟ್ರೀಯ ಪ್ರದರ್ಶನವೇ ನಡೆಯುತ್ತಿದೆ. ಉಡುಪು, ಚಪ್ಪಲಿ, ಬ್ಯಾಗ್, ವಾಚ್ ಎಲ್ಲವೂ ಡಿಸೈನರ್ ಇರುವಾಗ ಹೆಲ್ಮೆಟ್ ಡಿಸೈನರ್ ಬೇಡವಾ?

ಚೀನಾದಲ್ಲಿ ಗಂಡ ಸರಿಯಾಗಿ ಹಲ್ಲು ಉಜ್ಜುತ್ತಿಲ್ಲ ಎಂದು ಚಾಂಗ್‌ಕಿಂಗ್‌ನ ಯುವತಿಯೊಬ್ಬಳು ವಿಚ್ಛೇದನ ಕೇಳಿದ್ದಾಳೆ. 6 ತಿಂಗಳ ಹಿಂದೆ ಮದುವೆಯಾದ ಆಕೆಗೆ ಗಂಡ ಹಲ್ಲು ಉಜ್ಜುವ ವೈಖರಿಯೇ ಸಿಟ್ಟು ತರಿಸುತ್ತದಂತೆ. 'ಪತ್ನಿ ವಿಚ್ಛೇದನ ನೀಡದಂತೆ ಮಾಡಲು ಹಲ್ಲು ಉಜ್ಜುವುದು ಹೇಗೆ?' ಎಂಬ ಕೈಪಿಡಿಯನ್ನು ಯಾರಾದರೂ ಬರೆಯಬಹುದೇನೊ?

ಹೀಗೂ ಉಂಟೇ ಕಾಲಮ್ಮಿಗೆ ಪ್ರಶಸ್ತವಾದ ಚಿತ್ರ. ಜರ್ಮನಿಯಲ್ಲಿ ಉತ್ಸವದ ಸಲುವಾಗಿ ತಾಲೀಮಿನಲ್ಲಿ ನಿರತರಾದ ಹುಡುಗಿಯರಿಗೆ ಉತ್ಸವದಲ್ಲಿ ಪಾಲ್ಗೊಳ್ಳುವ ತವಕ. ಹೊರಗಿನ ಲೋಕದ ಪರಿವೆಯೇ ಇಲ್ಲ. ಆದರೆ ಹೊರಗೆ ನಿಂತು ಒಳಗಿನ ಲೋಕ ನೋಡುತ್ತಿರುವವರನ್ನು ಕ್ಯಾಮೆರಾ ಕಣ್ಣು ನೋಡುತ್ತಿದೆ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65